# ಕೃಷ್ಣನ ಸಮಯ ಬುದ್ಧಿ

ತಮಿಳು ಮೂಲ: ನಿರ್ಮಾಲ್ಯಂ
ಕನ್ನಡಕ್ಕೆ : ರಾಘುವೇಶಾನಂದ ಚಿತ್ರ : ಶಂಕರ್

ಮಹಾಭಾರತ ಯುದ್ಧದ ಹದಿನೇಳನೆಯ ದಿನದಂದು ಸಂಜೆ..........




ಯುಧಿಷ್ಠಿರ ಕರ್ಣನಿಂದಾದ ಗಾಯಗಳಿಂದ ಆಗಲೇ ಕೋಪಗೊಂಡಿದ್ದ.
ಏನು? ಏತಕ್ಕೆ ನೀನಿಲ್ಲಿಗೆ ಬಂದೆ? ನಾನು ಇನ್ನೂ ಬದುಕಿರುವೆನೋ ಇಲ್ಲವೋ ಎಂದು ನೋಡಲಿಕ್ಕಾಗಿಯೇ? ಇಷ್ಟು ವರ್ಷ ನೀನು ಕರ್ಣನನ್ನು ಕೊಲ್ಲುವುದಕ್ಕಾಗಿ ಕಾಯುತ್ತಿದ್ದ. ಈಗ ಅವನೊಂದಿಗೆ ಯುದ್ಧ ಮಾಡುವುದನ್ನು ಬಿಟ್ಟು ಇಲ್ಲಿಗೆ ಬಂದಿದ್ದೀಯೆ. ನಿನ್ನ ಕೈಯಲ್ಲಿರುವ ಗಾಂಡೀವದಿಂದ ಏನು ಪ್ರಯೋಜನ?
5
ಅವಮಾನಿತನಾದ ಅರ್ಜುನ ಕ್ರೋಧದಿಂದ ಯುಧಿಷ್ಠಿರನನ್ನು ಕೊಲ್ಲಲು ತನ್ನ ಕತ್ತಿ ತೆಗೆದ. ಆದರೆ, ಕೃಷ್ಣ ಅವನ ಕೈಹಿಡಿದು ತಡೆದ.
ಅರ್ಜುನ, ನೀನು ಹೀಗೇಕೆ ದುಡುಕುತ್ತಿರುವೆ? ತಂದೆಯಂತೆ ಗೌರವಿಸಬೇಕಾದ ಅಣ್ಣನನ್ನು ಕೊಲ್ಲಬಯಸುವೆಯಾ?
ಕೃಷ್ಣ, ನಾನು ಅವನನ್ನು ದೇವರಂತೆ ಕಾಣುವೆನು. ನನ್ನ ಗಾಂಡೀವದ ಬಗ್ಗೆ ಯಾರಾದರೂ ಲಘುವಾಗಿ ಮಾತನಾಡಿದರೆ ಅವರನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದ್ದೇನೆ. ಇದು ನಿನಗೂ ಗೊತ್ತಿದೆ. ಈಗ, ನನ್ನ ಅಣ್ಣನನ್ನು ಕೊಲ್ಲಬೇಕೆ ಅಥವಾ ನನ್ನ ವ್ರತವನ್ನು ಭಂಗ ಮಾಡಬೇಕೆ ಎಂದು ತಿಳಿಯದಾಗಿದೆ.
6
ಅರ್ಜುನ, ನಿನ್ನ ಗಾಂಡೀವಕ್ಕೆ ಅವಮಾನ ಮಾಡುವವರನ್ನು ಕೊಲ್ಲುವೆನೆಂಬುದು ನಿನ್ನ ಪ್ರತಿಜ್ಞೆ ಅಲ್ಲವೇ? ನೀನು ಯುಧಿಷ್ಠಿರನಿಗೆ ಅವಮಾನವಾಗುವಂತೆ ಮಾತನಾಡು. ಅವನ ಶಕ್ತಿ ಶೌರ್ಯಗಳನ್ನು ಹೀಯಾಳಿಸು. ಅದು ಅವನನ್ನು ಕೊಲ್ಲುವುದಕ್ಕಿಂತ ಹೆಚ್ಚು. ಅವನು ಅವಮಾನಕ್ಕಿಂತ ಮೃತ್ಯುವನ್ನು ಬಯಸುತ್ತಾನೆ. ಅದರಿಂದ ನಿನ್ನ ಪ್ರತಿಜ್ಞೆಯೂ ಭಂಗವಾಗುವುದಿಲ್ಲ, ಅವನನ್ನು ಶಿಕ್ಷಿಸಿದಂತೆಯೂ ಆಗುತ್ತದೆ.
7
ಇದು ಅರ್ಜುನನಿಗೆ ಸರಿ ಎನಿಸಿತು. ಅವನು ಯುಧಿಷ್ಠಿರನನ್ನು ಅವಹೇಳನ ಮಾಡಲು ಪ್ರಾರಂಭಿಸಿದನು.
ಅಣ್ಣ, ಯಾರೊಡನೆಯಾದರೂ ಎಂದಾದರೂ ನೀನು ಕಾದಿರುವೆಯಾ? ನಿನಗೆ ಯೋಧನ ಯಾವ ಕೌಶಲ್ಯವಿದೆ?
8


ಅರ್ಜುನ ಹೀಗೆಂದರೂ, ತನ್ನಲ್ಲಿ ಅಣ್ಣನನ್ನು ಅವಮಾನ ಮಾಡಿದನಲ್ಲಾ ಎಂದು ಜುಗುಪ್ಸೆಪಟ್ಟ. ಪ್ರಾಯಶ್ಚಿತ್ತವಾಗಿ ತನ್ನನ್ನು ತಾನೇ ಕೊಂದುಕೊಳ್ಳಲು ನಿರ್ಧರಿಸಿದ. ಇದನ್ನರಿತ ಕೃಷ್ಣ ಅವನ ಕೈ
ಕೃಷ್ಣ, ನನ್ನ ಅಣ್ಣ ಧರ್ಮದ ಮೂರ್ತಿ. ನಾನು ಅವನನ್ನು ತಂದೆಗಿಂತಲೂ ಹೆಚ್ಚಾಗಿ ಗೌರವಿಸುತ್ತೇನೆ. ಅಂಥವನನ್ನು ಅವಮಾನಿಸಿದ ಮೇಲೆ ಇನ್ನು ಬದುಕಿದ್ದೇನು ಪ್ರಯೋಜನ? ನನಗೆ ಯಾವ ನರಕ ಕಾದಿದೆಯೋ!
ಅರ್ಜುನ, ದುಡುಕಬೇಡ. ಆತ್ಮಹತ್ಯೆ ಪಾಪವಲ್ಲವೇ?
9
ಸ್ವಲ್ಪ ನಿಲ್ಲು. ತನ್ನ ಬಗ್ಗೆ ತಾನೇ ಬಡಾಯಿ ಕೊಚ್ಚಿಕೊಳ್ಳುವುದು ಸಾವಿಗಿಂತ ಮಿಗಿಲು. ನಿನ್ನ ಶಕ್ತಿಯ ಬಗ್ಗೆ ನೀನೇ ಜಂಭ ಕೊಚ್ಚಿಕೊ. ಅದು ಸಮಸ್ಯೆಯನ್ನು ಬಗೆ ಹರಿಸುತ್ತದೆ.
10
ಅಂತೆಯೇ ಅರ್ಜುನ ತನ್ನನ್ನು ತಾನು ಹೊಗಳಿ ಕೊಳ್ಳಲು ಆರಂಭಿಸಿದ.
ನಾನು ದೊಡ್ಡ ಪರಾಕ್ರಮಿ. ಪ್ರಪಂಚವನ್ನೇ ಜಯಿಸಿದ್ದೇನೆ. ಪಾಶುಪತವನ್ನು ಪಡೆದಿದ್ದೇನೆ. ದೇವತೆಗಳೂ ನನಗೆ ಗೌರವ ತೋರುತ್ತಾರೆ. ಯಾರೂ ನನಗೆ ಸಮ ಇಲ್ಲ.
11
ನಂತರ ನೇರವಾಗಿ ತನ್ನ ಅಣ್ಣನ ಬಳಿಗೆ ಹೋಗಿ, ಅವನ ಪಾದಗಳಿಗೆ ಅಡ್ಡ ಬಿದ್ದು, ತನ್ನ ಕಣ್ಣೀರಿನಿಂದ ಅವನ ಪಾದಗಳನ್ನು ತೊಳೆದ.
ಯುಧಿಷ್ಠಿರ, ಅರ್ಜುನನನ್ನು ಆಶೀರ್ವದಿಸಿ ರಣಭೂಮಿಗೆ ಕಳುಹಿಸು.
ಮಾಧವ, ಪರಂಧಾಮ, ಕೇಶವ, ಕೃಷ್ಣ, ನಾನು ಕೇವಲ ನಿನ್ನ ಕೈಗೊಂಬೆ. ಕುರುಕ್ಷೇತ್ರದ ಹಣೆ ಬರಹವನ್ನೇ ಬದಲಾಯಿಸಿದವನು ನೀನು. ನೀನು ಆಡಿಸಿದಂತೆ ಆಡುತ್ತೇನೆ.
ಅರ್ಜುನ! ವಿಜಯಿಯಾಗಿ ಹಿಂದಿರುಗಿ ಬಾ!
12
ಅರ್ಜುನನು ಕರ್ಣನನ್ನು ಹೇಗೆ ಕೊಂದ ಎಂಬುದು ಮಹಾಭಾರತದಲ್ಲಿ ಪ್ರಸಿದ್ಧವಾದ ಕಥೆ.
13